**ದಿನಾಂಕ:31–03–2022 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಅರ್ಜಿಗಳ ಮೇಲಿನ ಆದೇಶದಂತೆ ಮುಂದುವರೆದ ಪಾಟೀ ಸವಾಲುಃ 3 ಮತ್ತು 5 ನೇ ಪ್ರತಿವಾದಿಯರ ಪರ ಶ್ರೀ.ಕೆ.ಜಿ.ಎಸ್ ವಕೀಲರಿಂದ :**

ನನಗೆ ಇಬ್ಬರು ಅಣ್ಣಂದಿರು ಮತ್ತು ಇಬ್ಬರು ತಮ್ಮಂದಿರು. ಈ ದಾವೆ ಹಾಕುವ ಕಾಲಕ್ಕೆ ನನ್ನ ಮನೆತನದ ಎಲ್ಲಾ ವ್ಯವಹಾರಗಳ ಬಗ್ಗೆ ತಿಳುವಳಿಕೆ ಇತ್ತು. ವಾದ ಪತ್ರದಲ್ಲಿರುವ ಸಹಿಯನ್ನು ತೋರಿಸಲಾಗಿ ಸಾಕ್ಷಿ ಅದು ತನ್ನ ಸಹಿ ಎನ್ನುತ್ತಾರೆ. ಸಾಕ್ಷಿಯು ವಕಾಲತ್ತಿನಲ್ಲಿರುವ ಸಹಿಯನ್ನು ತನ್ನದೆಂದು ಗುರುತಿಸುತ್ತಾರೆ. ಸಾಕ್ಷಿಗೆ ಒಂದು ದಾಖಲೆಯ ಜರಾಕ್ಸ್ ಪ್ರತಿಯಲ್ಲಿ ಇರುವ ಸಹಿಯನ್ನು ತೋರಿಸಲಾಗಿ ಅದು ತನ್ನ ಸಹಿ ಎಂದು ಯಾವಾಗ ಮಾಡಿರುವುದಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯು ದಿಃ19–11–1993 ರಂದು ನನ್ನ ಸಹೋದರರು ಮತ್ತು ನನ್ನ ತಂದೆ ಮನೆತನದ ಆಸ್ತಿಗಳ ಬಗ್ಗೆ ವಾಟ್ನಿ ಮಾಡಿಕೊಂಡ ದಾಖಲೆಯ ಜರಾಕ್ಸ್ ಪ್ರತಿಯಾಗಿದೆ ಎಂದರೆ ಆಗ ನನ್ನನ್ನು ಕರೆದಿರಲಿಲ್ಲ. ದಿಃ 19–11–1993 ರಂದು ನನ್ನ ತಂದೆ, ಸಹೋದರರು ಮತ್ತು ನಾನು ಸೇರಿ ನಮ್ಮ ಘರಾಣೆದ ಆಸ್ತಿಗಳನ್ನು ವಾಟ್ನಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಮ್ಮ ಘರಾಣೆದ ರೈಸ್ ಮಿಲ್, ಮನೆಗಳು ಮತ್ತು ಜಮೀನುಗಳ ವಾಟ್ನಿಯಾಗಿದೆ ಎಂದರೆ ಸರಿಯಲ್ಲ. ನಮ್ಮ ಘರಾಣೆಗೆ ಸರ್ವೇ ನಂಬರ 208 ರಲ್ಲಿ 5 ಎಕರೆ 4 ಗುಂಟೆ, ಸರ್ವೇ ನಂಬರ 216/1 ರಲ್ಲಿ 3 ಎಕರೆ 24 ಗುಂಟೆ ಇರುವ ಬಗ್ಗೆ ನೆನಪಿದೆ, ಉಳಿದ ಜಮೀನುಗಳ ಬಗ್ಗೆ ನೆನಪಿಲ್ಲ. ನಾನು ಈ ಹಿಂದೆ ದಾವೆ ಹಾಕುವಾಗ ಮೇಲೆ ಹೇಳಿದ ಎರಡು ಆಸ್ತಿಗಳ ಬಗ್ಗೆ ಮಾತ್ರ ನೆನಪಿಟ್ಟುಕೊಂಡಿದ್ದೇನೆ ಹೊರತು ಬೇರೆ ಆಸ್ತಿಗಳ ಬಗ್ಗೆ ನೆನಪಿಟ್ಟುಕೊಂಡಿಲ್ಲ ಎಂದರೆ ಸದರಿ ಆಸ್ತಿಗಳ ಬಗ್ಗೆ ಮಾತ್ರ ಗೊತ್ತಿದೆ

ಆರ್.ಎಸ್ ನಂ.175/2 ರಲ್ಲಿ 9 ಎಕರೆ 3 ಗುಂಟೆ ನನ್ನ ತಂದೆಯ ಹೆಸರಿನಲ್ಲಿತ್ತು ಎಂದರೆ ನೆನಪಿಲ್ಲ. ಸದರಿ ಜಮೀನಿನ ದಕ್ಷಿಣದ 4 ಎಕರೆ 3 ಗುಂಟೆ ನನ್ನ ತಂದೆಯ ಹೆಸರಿನಲ್ಲಿ ದಾಖಲಾಗಿತ್ತು ಎಂದರೆ ನನಗೆ ತಿಳಿಸಿಲ್ಲ. ಸದರಿ 4 ಎಕರೆ 3 ಗುಂಟೆಯು ನನ್ನ ತಂದೆಯ ನಂತರ ನನಗೆ ಹೋಗಬೇಕೆಂದು ವಾಟ್ನಿಯಲ್ಲಿ ಕರಾರು ಆಗಿತ್ತು ಎಂದರೆ ಸರಿಯಲ್ಲ. ಸದರಿ ಜಮೀನು ಈಗ ಯಾರ ಹೆಸರಿನಲ್ಲಿದೆ ಎಂದು ಗೊತ್ತಿಲ್ಲ. ಸದರಿ ಜಮೀನು ಈಗ ಮಹಮ್ಮದ್ ಹಯಾತ್ ಸಾಬ್ ತಂದೆ ರಸೂಲ್ ಸಾಬ್ ಬಡಗಿ ರವರ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರಿನಲ್ಲಿದ್ದ ಜಮೀನು ಹಯಾತ್ ಸಾಬ್ ರವರ ಹೆಸರಿನಲ್ಲಿ ಹೇಗೆ ಆಯಿತು ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ. ಸಾಕ್ಷಿಗೆ ಇನ್ನೊಂದು ಜರಾಕ್ಸ ಪ್ರತಿಯ ದಾಖಲೆಯನ್ನು

ತೋರಿಸಿ ಅದರಲ್ಲಿರುವ ಸಹಿಯ ಬಗ್ಗೆ ಕೇಳಿದಾಗ ಅದು ತನ್ನ ಸಹಿ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ನನ್ನ ತಂದೆ ಬ್ಯಾಂಕಿಗೆ ಸಹಿ ಮಾಡಬೇಕು ಬಾ ಎಂದು ಕರೆದಾಗ ಆ ಸಹಿ ಹಾಕಿದ್ದೇನೆ. ಸದರಿ ಸಹಿಯನ್ನು ನಾನು ಹಾನಗಲ್ಲನ ಎಸ್.ಬಿ.ಐ ಬ್ಯಾಂಕಿನಲ್ಲಿ ಹಾಕಿದ್ದೇನೆ. ಆ ದಿನ ಒಂದೇ ಸಹಿ ಹಾಕಿದ್ದೆ. ಯಾವ ದಾಖಲೆಗೆ ಸಹಿ ಹಾಕಿದ್ದೇನೆ ಎಂದು ಗೊತ್ತಿಲ್ಲ. ನನ್ನ ತಂದೆ ಇದ್ದಾಗ ಸದರಿ ಸಹಿಯನ್ನು ಯಾಕೆ ಪಡೆದಿದ್ದಾರೆ ಎಂದು ಹಾಗೂ ಬ್ಯಾಂಕಿನ ಅಧಿಕಾರಿಗಳ ಬಳಿಯೂ ಆ ಬಗ್ಗೆ ವಿಚಾರಿಸಿಲ್ಲ. ಮೇಲೆ ಹೇಳಿದ 4 ಎಕರೆ 3 ಗುಂಟೆಯನ್ನು ನಾನು ಮತ್ತು ನನ್ನ ತಂದೆ ಸೇರಿ ದಿಃ17-07-1999 ರಂದು ಮಹಮ್ಮದ್ ಹಯಾತ್ ಸಾಬ್ ರವರಿಗೆ ಮಾರಾಟ ಮಾಡಿದ್ದೇವೆ ಎಂದರೆ ನನ್ನ ತಂದೆ ಆ ಬಗ್ಗೆ ತಿಳಿಸಿಲ್ಲ.

1993 ರಲ್ಲಿ ರಿ.ಸ ನಂಬರ 208 ರಲ್ಲಿ 5 ಎಕರೆ 4 ಗುಂಟೆ, ರಿ.ಸ ನಂಬರ 201/4 ರಲ್ಲಿ 4 ಎಕರೆ 5 ಗುಂಟೆ ಪೈಕಿ 2 ಎಕರೆ 32 ಗುಂಟೆ ಮತ್ತು ರಿ.ಸ ನಂಬರ 175/2 ರಲ್ಲಿ 2 ಎಕರೆ 20 ಗುಂಟೆ ಜಯಲಿಂಗಪ್ಪ ರವರ ಹಿಸ್ಸೇಗೆ ಹೋಗಿತ್ತು ಎಂದರೆ ಸರಿಯಲ್ಲ. ಸದರಿ ಹಿಸ್ಸೇಯ ಬಗ್ಗೆ ನನಗೆ ಯಾವತ್ತೂ ನನ್ನ ತಂದೆ ಕರೆದಿಲ್ಲ.

(**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಸಹಿ/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ

ಮತ್ತು ಜೆ.ಎಂ.ಎಫ್.ಸಿ, ಹಾನಗಲ್